**ಪಿ.ಡಬ್ಲೂ. 1**

ಇಂದು ದಿಃ **14.02.2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ**

1. ನ್ಯಾಯಾಲಯದ ಮುಂದೆ ಇರುವ ಆರೋಪಿ ನನ್ನ ಗಂಡ ಎಂದರೆ ಸರಿ. ನನ್ನ ಹಾಗೂ ಆರೋಪಿಯ ವಿಚ್ಚೇದನ ಆಗಿದೆ ಎಂದರೆ ಸರಿ. ಸದರಿ ವಿಚ್ಚೇದನ ಯಾವ ನಂಬರಿನ ಪ್ರಕರಣದಲ್ಲಿ ಆಗಿದೆ ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಸದರಿ ವಿಚ್ಚೇದನ 2018 ರಲ್ಲಿ ಆಗಿರುತ್ತದೆ. ಸದರಿ ವಿಚ್ಚೇದನ ಪ್ರಕರಣದ ವಿವರಣೆ ಈ ಪ್ರಕರಣದ ದೂರಿನಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಚೆಕ್ಕನ್ನು ಪರ್ಮನೆಂಟ್ ಅಲಿಮನಿಗಾಗಿ ನೀಡಲಾಗಿದೆ ಎಂದು ದಾಖಲಾತಿ ಇದೆ. ಅದರೇ ಇನ್ನು ಹಾಜರುಪಡಿಸಿಲ್ಲ. ಸದರಿ ದಾಖಲಾತಿಯನ್ನು ಹಾಜರುಪಡಿಸಲು ಅನಾನುಕೂಲತೆ ಇಲ್ಲ ಎಂದರೆ ಸರಿ. ನನಗೆ ಒಟ್ಟಾಗಿ 32 ಲಕ್ಷ ರೂಪಾಯಿ ಅಲಿಮನಿ ಕೊಡಬೇಕು ಎಂದು ಆಗಿರುತ್ತದೆ. ಆರೋಪಿ ನನಗೆ ಈಗಾಗಲೇ 9 ಲಕ್ಷದ 75 ಸಾವಿರ ರೂಪಾಯಿಗಳನ್ನು ನೀಡಿರುತ್ತಾರೆ. ಈ ಪ್ರಕರಣ ಹಾಗೂ ಇನ್ನುಳಿದ ಎರಡು ಪ್ರರಕಣಗಳ ಚೆಕ್ಕನ್ನು ಆರೋಪಿ ನನಗೆ ನೀಡಬೆಕಾಗಿರುವ ಪರ್ಮನೆಂಟ್ ಅಲಿಮನಿ ಬಾಬ್ತು ನೀಡಿರುತ್ತಾರೆ.

2. ನಾನು ಆರೋಪಿಯಿಂದ ವಿಚ್ಚೇದನ ಪಡೆಯುವ ಮೊದಲು 8 ವರ್ಷಗಳ ಕಾಲ ಜೀವನ ನಡೆಸಿರುತ್ತೇನೆ. ನಾನು ಹಾಗೂ ಆರೋಪಿ ಒಂದೇ ಮನೆಯಲ್ಲಿ ಮುಂಬೈನಲ್ಲಿ ಇರುತ್ತಿದ್ದೆವು. ಆರೋಪಿ ತನ್ನ ವ್ಯವಹಾರಕ್ಕೆ ಸಂಬಂದಿಸಿದಂತೆ ಅವರ ಅಗತ್ಯತೆಗಾಗಿ ಖಾಲಿ ಚಕ್ಕುಗಳಿಗೆ ಸಹಿ ಮಾಡಿ ಮನೆಯಲ್ಲಿ ಇಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ವಿಚ್ಚೇದನ ಪಡೆದು ಸದರಿ ಮನೆ ಬಿಟ್ಟು ಬರಬೇಕಾದರೇ ಆರೋಪಿ ಸಹಿ ಮಾಡಿರುವ ಮೂರು ಖಾಲಿ ಚೆಕ್ಕುಗಳನ್ನು ತೆಗೆದುಕೊಂಡು ಬಂದಿರುತ್ತೇನೆ ಎಂದರೆ ಸಾಕ್ಷಿ ಆರೋಪಿ ಸದರಿ ಚೆಕ್ಕುಗಳನ್ನು ನ್ಯಾಯಾಲಯದಲ್ಲಿ ನೀಡಿರುತ್ತಾರೆ ಎನ್ನುತ್ತಾರೆ. ನನ್ನ 8 ವರ್ಷಗಳ ಜೀವನ ಹಾಳಾಯಿತು ಎಂದು ಹೇಳಿ ಆರೋಪಿಗೆ ಬುದ್ದಿ ಕಲಿಸುವ ಉದ್ದೇಶದಿಂದ ಸದರಿ ಚೆಕ್ಕುಗಳನ್ನು ನಾನು ದುರುಪಯೋಗಪಡಿಸಿಕೊಂಡು ಈ ಪ್ರಕರಣಗಳನ್ನು ಆರೋಪಿ ವಿರುದ್ದ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿ ಬಿಜಿನೆಸ್ ಮಾಡುತ್ತಾರೆ. ನನಗೆ 30 ಲಕ್ಷ ರೂಪಾಯಿ ನೀಡುವಷ್ಟು ಆದಾಯ ಆರೋಪಿಗೆ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ ಮೇಲೆ ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಆತನ ಚೆಕ್ಕುಗಳನ್ನು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವತ್ತು ಚೆಕ್ಕುಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಸದರಿ ಚೆಕ್ಕುಗಳನ್ನು ಆರೋಪಿ ನನಗೆ ಸಂಪೂರ್ಣ ಜೀವನಾಂಶಕ್ಕಾಗಿ ಕೊಟ್ಟಿದ್ದೆ ಆದರೇ ಅದಕ್ಕೆ ಸಂಬಂದಿಸಿದಂತೆ ದಾಖಲೆಗಳನ್ನು ನಾನು ಹಾಜರುಪಡಿಸುತ್ತಿದ್ದೆ ಸದರಿ ದಾಖಲೆಗಳನ್ನು ಹಾಜರುಪಡಿಸದೇ ಇದುದ್ದರಿಂದ ಸದರಿ ಚೆಕ್ಕುಗಳು ನಾನು ದುರುಪಯೋಗಪಡಿಸಿಕೊಂಡ ಚೆಕ್ಕುಗಳು ಎಂದರೆ ಸರಿಯಲ್ಲ. ಸದರಿ ಈ ಪ್ರಕರಣದ ಹಾಗೂ ಇನ್ನು ಉಳಿದ ಎರಡು ಪ್ರಕರಣಗಳ ಚೆಕ್ಕಿಗಾಗಲೀ ಹಾಗೂ ಆರೋಪಿಗಾಗಲಿ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾ..ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).**

ಓ ಹೇ ಕೇ ಸರಿ ಅದೆ,

**( ಅಮೋಲ್ ಜಯಕುಮಾರ ಹಿರಿಕುಡೆ.)**
4 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಧಾರವಾಡ.